ಬೇರೆ ಕಡೆ ಬೆಳಗಾಂನಲ್ಲಿ ನಡೆಯುತ್ತಿಲ್ಲ. ಬೀದರ್‌ನಲ್ಲಿ ನಡೆಯಬೇಕಾದರೆ ಅವರಿಗೆ ಹೇಗೆ protection ಕೊಡುವುದು? ಅಲ್ಲಿ ಮೊದಲಿದ್ದ ಪೊಲೀಸ್ ಅಧಿಕಾರಿ ಎಷ್ಟು ವರ್ಷ ಅಲ್ಲಿಯೇ ಕೆಲಸ ಮಾಡಿದ್ದರೂ ಮತ್ತೆ ಅವರಿಗೆ ಅಲ್ಲಿಗೆ ಪೋಸ್ಟಿಂಗ್ ಕೊಟ್ಟಿದ್ದಾರೆ. "ನಾವು ಯಾರಿಗೆ ಪೋಸ್ಟಿಂಗ್ಸ್ ಕೊಡುತ್ತೀರಿ, ಯಾರಿಗೆ ಬಿಡುತ್ತೀರಿ" ಎಂದು ಹೇಳಲಿಕ್ಕೆ ಹೋಗುವುದಿಲ್ಲ. ಒಂದು ಮಾತು ಹೇಳುತ್ತೇವೆ. ಬೀದರ್ ಗಲಾಟೆ ವಿಷಯ ಕನ್ನಡ ಪ್ರಭ, ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ ಬಂದಿದೆ. ಒಂದು ರೀತಿಯ ಭಯಭೀತವಾದ ವಾತಾವರಣ ವಿಶೇಷವಾಗಿ ಇವತ್ತು ಬೀದರ್ ಜಿಲ್ಲೆ ಗಡಿಭಾಗದಲ್ಲಿ ಆಗಿದೆ. ಯಾವ ಪ್ರಕರಣಕ್ಕೂ ನಿಮ್ಮ ಅಧಿಕಾರಿಗಳು ಹೋಗುವುದಿಲ್ಲ. DIG ಹೋಗುವುದಿಲ್ಲ. ಉನ್ನತ ಮಟ್ಟದ ಅಧಿಕಾರಿಗಳು ಹೋಗುತ್ತಿಲ್ಲ. ಹಾಗಾಗಿ ಇವತ್ತಿನ ದಿವಸ ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದೇನೆ. ಈ ರೀತಿಯಾದ ಭಯಭಿತವಾದ ವಾತಾವರಣ ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬ ಮಾತನ್ನು ಕೂಡ ಸದನಕ್ಕೆ ತಿಳಿಸಬೇಕು ಮತ್ತು ನಮಗೆ ಇವತ್ತು ಸ್ಪಷ್ಟವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳೂ ಹೇಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಪ್ರತಿಪಕ್ಷದ ನಾಯಕರಾದಂಥ ಧರ್ಮಸಿಂಗ್ ರವರು ಶೂನ್ಯ ವೇಳೆಯಲ್ಲಿ ಪ್ರಮುಖವಾದ ವಿಚಯವನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ತತ್‌ಕ್ಷಣ ವರದಿಯನ್ನು ತರಿಸಿಕೊಂಡು ಇಂದು ಸಂಜೆ ಅಥವಾ ನಾಳೆ ನಾವು statement ಮಾಡುತ್ತೇವೆ. ಎರಡನೆಯದಾಗಿ ತತ್‌ಕ್ಷಣ ಕಾನೂನು ಸುವ್ಯವಸ್ಥೆಗೆ ಅಡ್ಡಿಯಾಗದ ರೀತಿಯಲ್ಲಿ, ಸಾಮಾನ್ಯ ಜನರಿಗೆ ಯಾವುದೇ ರೀತಿಯ ಕಿರುಕುಳ ಕೊಡದಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ. ಘಟನೆ ನಡೆದಿರುವ ಬಗ್ಗೆ ವಿವರವಾದ ಮಾಹಿತಿಯನ್ನು ತರಿಸಿ ಇವತ್ತು ಅಥವಾ ನಾಳೆ ನಾನು statement ಮಾಡಿಸುತ್ತೇವೆ.

ಉಪಾಧ್ಯಕ್ಷರು : ಶ್ರೀ ವಾಟಾಳ್ ನಾಗರಾಜ್‌ರವರು ಮಾತನಾಡಿ.

ಆ) ವಿಷಯ:– ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಬಾಲ್ ಹೊಸೂರು ಗ್ರಾಮದ ಹೊರವಲಯದಲ್ಲಿ 200 ಕ್ಕೂ ಹೆಚ್ಚು ನವಿಲುಗಳ ಮರಣ ಹೋಮವಾಗಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಬಾಲೆಹೊಸೂರು ಗ್ರಾಮದ ಹೊರವಲಯದಲ್ಲಿ ಸುಮಾರು 200ಕ್ಕೂ ಹೆಚ್ಚು ನವಿಲುಗಳೊಂದಿಗೆ ಬೇರೆ ಬೇರೆ ಪಕ್ಷಿಗಳು, ಆಹಾರ ತಿನ್ನಲಿಕ್ಕೆ ಹೋದಂಥ ಬೇರೆ ಪ್ರಾಣಿಗಳು, ಎಮ್ಮೆ, ಹಸುಗಳು ಇವು ಸತ್ತಿರುವ ಬಹಳ ಗಂಭೀರ ಹಾಗೂ

ಗಹನವಾದ ವಿಚಾರವಾಗಿದೆ. ಈ ರೀತಿ ನೂರಾರು ನವಿಲುಗಳು ಸಾಯಲು ಕಾರಣವೇನು? ಆ ಜಮೀನಿನಲ್ಲಿ ವಿಷಭರಿತ ಆಹಾರ ಪದಾರ್ಥಗಳನ್ನು ಅಲ್ಲಿ ಎರಚಿದ್ದಾರೆ. ಅದನ್ನು ತಿಂದು ಸತ್ತಿವೆ. ಸತ್ತಿರುವ ನವಿಲುಗಳ ಗರಿಯನ್ನು ಜನ ಕಿತ್ತುಕೊಂಡು ಹೋಗುತ್ತಿದ್ದಾರೆ. ನನಗೆ ಅನ್ನಿಸುತ್ತದೆ ಈ ಕೃತ್ಯ ಬೇರೆ ಯಾವುದೇ ದೇಶದಲ್ಲಿ ಆಗಿದ್ದರೆ, ಸರ್ಕಾರಗಳು ರಾಜೀನಾಮೆ ಕೊಡುತ್ತಿದ್ದವು. ನಿಸರ್ಗ ನವಿಲುಗಳ ಕುಲವನ್ನೇ ನಾಶ ಮಾಡುವಂಥದ್ದು ನಿರಂತರವಾಗಿ ನಡೆದುಹೋಗಿವೆ. ಪಕ್ಷಿಗಳು, ಪ್ರಾಣಿಗಳು ಬೆಳೆಯನ್ನು ತಿನ್ನುತ್ತವೆ ಎಂದು ಹೇಳಿ ಕರೆಂಟ್‌ನ ಬೇಲಿಯನ್ನು ರಾಜ್ಯದ ಅನೇಕ ಕಡೆಗಳಲ್ಲಿ ಇವೆ. ಈ ಶಿರಹಟ್ಟಿ ತಾಲ್ಲೂಕಿನ ಬಾಲೆಹೊಸೂರು ಗ್ರಾಮದಲ್ಲಿ ನಡೆದಿರುವುದು ಅತ್ಯಂತ ಗಂಭೀರವಾದ ಘಟನೆ. ಈ ಬಗ್ಗೆ ಸಮಗ್ರವಾದಂಥ ತನಿಖೆಯಾಗಬೇಕು, ಯಾವ ಜಮೀನಿನವರು ಏತಕ್ಕೋಸ್ಕರ ಈ ಕೆಲಸವನ್ನು ಮಾಡಿದ್ದಾರೆ? ಆ ವ್ಯಕ್ತಿಗಳು ಯಾರು? ಇದುವರೆಗೂ ಅವರನ್ನು ಬಂಧಿಸಿಲ್ಲ. ಅದರ ಬಗ್ಗೆ ಪರಿಶೀಲಿಸಿಲ್ಲ. ಇದರ ಬಗ್ಗೆ ಸರ್ಕಾರಕ್ಕೆ ಇದುವರೆಗೆ ಏನು ಮಾಹಿತಿ ಇದೆ? ಸರ್ಕಾರದಿಂದ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಶ್ರೀ ಸಿ.ಚೆನ್ನಿಗಪ್ಪ(ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) : ಹಿರಿಯ ಶಾಸಕರಾದ ವಾಟಾಳ್ ನಾಗರಾಜ್‌ರವರು ಅದರ ಬಗ್ಗೆ ಹೆಚ್ಚಿನ ಗಮನವನ್ನು ಸೆಳೆದಿದ್ದಾರೆ. ಈ ಘಟನೆ ನಡೆದಾಗಲೇ ನಮ್ಮ ಅರಣ್ಯ ಮತ್ತು ಪೊಲೀಸ್ ಅಧಿಕಾರಿಗಳಿಗೆ combined spot inspection ಮಾಡಿ ಎಂದು ಕಳುಹಿಸಿದಾಗ ಅಲ್ಲಿ ಯಾರೋ ತಿಳಿಗೇಡಿಗಳಿಬ್ಬರು ಮಾತ್ರ ಈ ಕೆಲಸ ಮಾಡಿದ್ದಾರೆ, ಅವರ ಹೆಸರು ಗೊತ್ತಿಲ್ಲವೆಂದು ಅಲ್ಲಿನ ಜನರು ತಿಳಿಸಿದ್ದಾರೆ. ಅವರಿಬ್ಬರ ಬಗ್ಗೆ enquiry ಮಾಡಿಸಿ ಅವರ್ಯಾರು ಎಂದು ತಿಳಿದುಕೊಂಡು ವರದಿಯನ್ನು ತರಲಿಕ್ಕೆ ಸೂಚಿಸಿದ್ದೇವೆ. ಈ ಪಕ್ಷಿಗಳು ಸಾಯಲಿಕ್ಕೆ ಕಾರಣವೇನು? ಈ ಬಗ್ಗೆ postmortem ಮಾಡಿ ಅದರ ಬಗ್ಗೆ ಕೂಡ ಮಾಹಿತಿ ಬೇಕು, Veterionary departmentನ ಅಧಿಕಾರಿಗಳನ್ನು ಅಲ್ಲಿಗೆ ಪೋಸ್ಟ್ ಮಾಡಿದ್ದೇವೆ. ಅಲ್ಲಿಂದ ವರದಿ ಬಂದ ತಕ್ಷಣ ನವಿಲುಗಳು ಇತರೆ ಪಕ್ಷಿ ಪ್ರಾಣಿಗಳು ಯಾವ ಕಾರಣಕ್ಕೆ ಮೃತವಾದವು ಎಂಬುದನ್ನು ಕಂಡುಹಿಡಿದು ಸಂಬಂಧಪಟ್ಟವರ ಮೇಲೆ ಸರ್ಕಾರದಿಂದ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು : ಇವತ್ತು ವರದಿ ತರಿಸುವುದಾಗಿ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಯಾವಾಗ ವರದಿಯನ್ನು ತರಿಸುತ್ತೀರಿ? ಇದರ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಬಂದಿವೆ. ಅಲ್ಲಿ ನಡೆದಿರುವ ಘಟನೆಯ ಬಗ್ಗೆ ಅರಣ್ಯ ಇಲಾಖೆಯವರಿಗೆ ಇಷ್ಟೋತ್ತಿಗಾಗಲೇ ವರದಿ ಬರಬಾರದೇ? ತಾವು ಅರಣ್ಯ ಸಚಿವರಾಗಿದ್ದೀರಿ. ಪತ್ರಿಕೆಗಳ ಮೂಲಕ ಎಲ್ಲಾ ವರದಿಗಳು ಬಂದುಬಿಟ್ಟಿವೆ.

ಎಷ್ಟು ನವಿಲುಗಳು ಸತ್ತಿವೆ? ಪಕ್ಷಿಗಳು ಎಷ್ಟು ಸತ್ತಿವೆ? ಯಾರ ಜಮೀನಿನಲ್ಲಿ ವಿಷಮಿಶ್ರಿತ ಆಹಾರ ಎರಚಿದ್ದರು, ಈ ಎಲ್ಲಾ ವಿಷಯಗಳೂ ಪತ್ರಿಕೆಗಳಲ್ಲಿ ಬಹಿರಂಗವಾಗಿ ವರದಿ ಬಂದಿರುವಾಗ ಸರ್ಕಾರಕ್ಕೆ ಬರಲಿಲ್ಲವೆಂದರೆ ಹೇಗೆ? ತಾವು ಹೇಳಿ.

ಶ್ರೀ ಸಿ.ಚೆನ್ನಿಗಪ್ಪ : ಸರ್ಕಾರಕ್ಕೆ ವರದಿಯಿದೆ. ಆಪಕ್ಷಿಗಳಿಗೆ ಯಾರು ವಿಷದ ಆಹಾರ ಹಾಕಿದ್ದಾರೆಂಬುದು ನಿಖರವಾಗಿ ಗೊತ್ತಾಗಿಲ್ಲ. ಆ ವ್ಯಕ್ತಿಗಳ ಹೆಸರು ಕಂಡುಹಿಡಿಯಲಿಕ್ಕೆ ಪೊಲೀಸ್‌ನವರನ್ನು ಪೋಸ್ಟ್ ಮಾಡಿದ್ದೇವೆ. ಅರಣ್ಯ ಇಲಾಖೆ ಸಿಬ್ಬಂದಿಯನ್ನು ಕೂಡ ಅಲ್ಲಿಗೆ ಕಳುಹಿಸಿದ್ದೇವೆ. ಅಲ್ಲಿಂದ ವರದಿ ಬಂದ ತಕ್ಷಣ ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಪಕ್ಷಿಗಳು ಎಂದು ಹೇಳಿ ನಾವು ಲಘುವಾಗಿ ಪರಿಗಣಿಸುವುದು ಬೇಡ. ನಾನು ಮಾನ್ಯ ಅರಣ್ಯ ಸಚಿವರಿಗೆ ಏನು ಕೇಳುತ್ತಿದ್ದೇನೆಂದರೆ, ತಾವು ಆ ಸ್ಥಳಕ್ಕೆ ಹೋಗಿ ಬನ್ನಿ, ಒಂದು ಇತಿಹಾಸ ನಿರ್ಮಾರ್ಣವಾಗಲಿ. ಯಾರಾದರೂ ಮಾನವರು ಸತ್ತರೆ ನಾವೆಷ್ಟು ತಲೆಕೆಡಸಿಕೊಳ್ಳುತ್ತೇವೆ, ಪಕ್ಷಿಗಳು, ಪ್ರಾಣಿ ಕುಲವನ್ನೇ ನಾಶ ಮಾಡುವಂತ ವ್ಯವಸ್ಥೆಯನ್ನು ತಪ್ಪಿಸಬೇಕಾಗುತ್ತದೆ. ಅನೇಕ ಕಡೆ ರೈತರುಗಳು ಬೇಲಿಗಳಿಗೆ ಕರೆಂಟ್ ಬಿಡುವುದು, ಇವೆಲ್ಲವನ್ನು ತಪ್ಪಿಸಬೇಕಾಗುತ್ತದೆ. ಹಾಗಾಗಿ ಆ ಸ್ಥಳಕ್ಕೆ ತಾವೇ ಹೋಗಿ ಬನ್ನಿ. ತಾವು ಹೋದರೆ ಅದಕ್ಕೆ ಬೆಲೆಯು ಬರುತ್ತದೆ. ಅದಕ್ಕೆ ತಾವೇನು ಹೇಳುತ್ತೀರಿ?

ಶ್ರೀ ಎಸ್.ಎಸ್.ಪಾಟೀಲ್ : ಇದು ಕೇವಲ ಪಕ್ಷಿಯಾಗಿರದೆ, ರಾಷ್ಟ್ರಪಕ್ಷಿಯಾಗಿದೆ. ಅದಕ್ಕೆ ವಿಶೇಷ ಸ್ಥಾನ ಮಾನ ನೀಡಲಾಗಿದೆ. ಆ ಪಕ್ಷಿಯನ್ನು ಯಾರಾದರೂ ಹಿಡಿದರೆ, ಕೊಂದರೆ, ಮರ್ಡರ್‌ಗೆ ವಿಧಿಸುವ ಶಿಕ್ಷೆಗಿಂತಲೂ ದೊಡ್ಡ ಶಿಕ್ಷೆ ಇದೆ. ನಮ್ಮಲ್ಲಿ ಏನಾಗಿದೆಯೆಂದರೆ, ನಮ್ಮ ಅಧಿಕಾರಿಗಳದ್ದು ಬಹಳ ತಪ್ಪು ಇದೆ. ಬಿಂಕದ ಕಟ್ಟೆ, ಜೂಗೆ ನಾಯಿ ಹೋಗಿ ಚಿಗರೆಗಳೆಲ್ಲವನ್ನು ಕೊಂದು ಹಾಕಿದವು. ಇದರ ಬಗ್ಗೆ ನಿಮ್ಮೆಲ್ಲರ ಗಮನಕ್ಕೆ ಬಂದಿದೆಯೇ? ಯಾರ ಮೇಲೆ ಯಾವುದೇ ತರಹದ ಕ್ರಮಗಳಾಗಲಿಲ್ಲ. ಹಿಂದೆ ಚಿರತೆಯೊಂದು ಅನಾಯಾಸವಾಗಿ ಸಿಕ್ಕಿತ್ತು. ಅದು ಬಿಂಕದ ಕಟ್ಟೆ ಜೂನಿಂದ ತಪ್ಪಿಸಿಕೊಂಡು ಹೋಯಿತು. ನಂತರ, ಅದನ್ನು ಗುಂಡು ಹೊಡೆದು ಕೊಂದರು. ಇವತ್ತು ಚಿರತೆಗಳೆ ಸಿಗುವುದಿಲ್ಲ. ಈ ಕಾರಣಕ್ಕಾಗಿ ಅಲ್ಲಿರುವ ಅಧಿಕಾರಿಗಳದ್ದು ದೋಷವಿದೆ. ಅದರ ಬಗ್ಗೆ ನೀವು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಆ ಚಿರತೆಯನ್ನು ಗುಂಡು ಹೊಡೆದು ಕೊಂದಿರಿ. ಬಿಂಕದ ಕಟ್ಟೆ ಜೂನಿಂದ ಏಕೆ ಚಿರತೆ ತಪ್ಪಿಸಿಕೊಂಡು ಹೋಯಿತು? ಖಂಡಿತವಾಗಿಯೂ, ಈ ಪಕ್ಷಿಯನ್ನು ಬಹಳಷ್ಟು ಜನರು ಕೊಲ್ಲುತ್ತಿದ್ದಾರೆ. ಅದು ಇನ್ನೂ ನಡೆಯುತ್ತಿದೆ.

ಹೊಡೆಯುತ್ತಿದ್ದಾರೆ. ಊರಿನಲ್ಲಿ ಅವುಗಳು ಸಾಕಷ್ಟು ಸಂಖ್ಯೆಯಲ್ಲಿ ಸಾಯುತ್ತಿವೆ, ಆದಕಾರಣ ದಯವಿಟ್ಟು ಇದನ್ನು ಸಡಿಲಬಿಡಬೇಡಿ. ಯಾರು ಮಾಡಿದ್ದಾರೋ, ಕೂಡಲೇ ಅವರನ್ನು ಅರೆಸ್ಟ್ ಮಾಡಬೇಕು. ಅವರಿಗೆ ಶಿಕ್ಷೆಯಾಗಲಿ.

ಶ್ರೀ ಸಿ.ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಹಿರಿಯ ಮಾನ್ಯ ಸದಸ್ಯರು ಹೇಳಿದಂತೆ, ಈಗಾಗಲೇ ಇಲಾಖೆಯ ಅಧಿಕಾರಿಗಳೆಲ್ಲರೂ spotಗೆ ಹೋಗಿದ್ದಾರೆ. ನಿನ್ನೆ ಮೊನ್ನೆಯಿಂದಲೂ ಅಲ್ಲಿಯೇ ಮೊಕಂ ಹೂಡಿದ್ದಾರೆ. ಇವತ್ತು ಸಾಯಂಕಾಲ ನಮ್ಮ ಸೆಕ್ರೆಟರಿ, ಇನ್ನಿತರ ಅಧಿಕಾರಿಗಳೆಲ್ಲರೂ ಹೋಗಿ ತಾವು ಹೇಳಿರುವ ಪ್ರಕಾರವಾಗಿ ಸ್ಥಳ ಪರಿಶೀಲನೆ ಮಾಡಿ ಅದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ತಾವು ಹೋಗಿ ಎಂದರೆ, ಇದೊಳ್ಳೆ ಕಥೆ ಯಾಯಿತಲ್ಲಾ. ನೀವೆ ಅಲ್ಲಿಗೆ ಹೋಗಿ ಬರುವುದಕ್ಕಾಗುವುದಿಲ್ಲವೇ?

ಶ್ರೀ ಸಿ.ಚನ್ನಿಗಪ್ಪ : ಹೋಗುತ್ತೇನೆ, ಸರ್.

ಶ್ರೀ ವಾಟಾಳ್ ನಾಗರಾಜ್ : ಚನ್ನಿಗಪ್ಪನವರೆ, ನಾನು ತಮಗೆ ಹೇಳುತ್ತಿರುವುದೇನೆಂದರೆ, ಇದು ಬಹಳ ಗಂಭೀರವಾದ ಪರಿಸ್ಥಿತಿ. ಈ ಹಿಂದೆ ಯಾವಾಗಲೂ ಈ ರೀತಿ ನಡೆದಿರಲಿಲ್ಲ. ಬರೀ ಇದೊಂದೆ ಅಲ್ಲ. ನೀವು ತೀರ್ಮಾನ ಕೈಗೊಳ್ಳಬೇಕು. ತಮ್ಮ ಬೆಳೆಗಳನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಯಾರ್ಯಾರು ಬೇಲಿ ಹಾಕುತ್ತಾರೋ, ಆ ರೀತಿ ವಿದ್ಯುಚ್ಛಕ್ತಿ ಬೇಲಿ ಹಾಕುವುದರಿಂದ ಅನಾಹುತಗಳು ಆಗುತ್ತವೆ. ಈ ಅನಾಹುತಗಳು ಗಡಿಭಾಗಗಳಲ್ಲಿ. ಜರುಗುತ್ತವೆ. ನಾನು ಹೇಳುವುದೇನೆಂದರೆ, ತಾವು ಅಲ್ಲಿಗೆ ಹೋಗಿ ಬನ್ನಿ ಸ್ವಾಮಿ, ನೀವು ಏಕೆ ಹೋಗುವುದಿಲ್ಲ? ಹೇಳಿ, ನೀವು ಅಲ್ಲಿಗೆ ಹೋಗಿ ನೋಡಿಕೊಂಡು ಬನ್ನಿ. ತಾವು ಅದರ ಬಗ್ಗೆ ದಯವಿಟ್ಟು ಹೇಳಬೇಕು.

ಉಪಾಧ್ಯಕ್ಷರು : ಅಲ್ಲಿಗೆ ಹೋಗಿಬರುವುದಾಗಿ ಅವರು ಒಪ್ಪಿಕೊಂಡಿದ್ದಾರಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಮಗೆ ಈಗ ಏನಾಗಿದೆಯೆಂದರೆ, ನಾವು calling attention ಕೊಟ್ಟರೆ, ಅದು ಲೀಸ್ಟ್ ಆಗುವುದಿಲ್ಲ. reach ಆಗುವುದಿಲ್ಲ. ಬಹಳ ಮುಖ್ಯವಾಗಿರುವ Questions ಹಾಕಿದ್ದಾರೆ, ಅವು Unstarred Questions ಆಗಿಬಿಡುತ್ತವೆ. Zero hour ನಲ್ಲಿ mention ಮಾಡಿದ್ದಾರೆ, ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಸಾರ್ವಜನಿಕ ಹಿತಾದೃಷ್ಟಿಯಿಂದ ಅನೇಕ ಪ್ರಾಮುಖ್ಯವಾದ ವಿಚಾರಗಳನ್ನು ಯಾವ ರೂಲ್ಸ್‌ನಡಿ ತರಬೇಕೆಂಬುವುದೇ ನಮಗೆ ದೊಡ್ಡ ಸಮಸ್ಯೆಯಾಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಸಾರ್, ಅವರು ಬಾರಿ serious charge ಮಾಡಿದ್ದಾರೆ. Calling Attention ಕೊಟ್ಟರೆ ಬರುವುದಿಲ್ಲ, ನಾನು ಕೆಲವು

ಮುಖ್ಯವಾದ ಪ್ರಶ್ನೆಗಳನ್ನು ಹಾಕಿದ್ದರೆ, ಅವುಗಳನ್ನು ನೀವು starred questions ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲಿ ಏನಾದರೂ ನಡೆಯುತ್ತಿದ್ದರೆ, ಅದು ನಮಗೂ ಗೊತ್ತಾಗಬೇಕಲ್ಲ..... ವಾಸ್ತವಂಶವನ್ನೇ ನಾನು charge ಎಂದು ಹೇಳುತ್ತಿದ್ದೇನೆ. ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ನಾನು Calling Attention ಕೊಟ್ಟರೆ, ತೆಗೆದುಕೊಳ್ಳುತ್ತಿಲ್ಲವೆಂದು ಹೇಳುತ್ತಿದ್ದಾರೆ. ಮಾಜಿ ವಿಧಾನಸಭೆಯ ಅಧ್ಯಕ್ಷರಿಗೇ ನೀವು ಹೀಗೆ ಮಾಡುತ್ತಿದ್ದೀರೆಂದರೆ, ಇನ್ನು ನಮ್ಮ ಗತಿಯೇನು? ನಮಗೆ ಅರ್ಥವಾಗಬೇಕಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ತಾವು ತಪ್ಪು ಅರ್ಥ ಮಾಡಿಕೊಳ್ಳಬೇಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು ಹೇಳಿದ್ದು ರೆಕಾರ್ಡ್‌ಗೆ ಹೋಗಿದೆ.

ಶ್ರೀ ಎಸ್.ಎಸ್.ಪಾಟೀಲ್ : ಅವರು ಮಾತನಾಡುತ್ತಾ ನಾವು questions ಹಾಕಿದರೆ, ಅವು unstarred questions ಆಗುತ್ತವೆ. ಅವು starred questions ಆಗಿ ಬರುವುದಿಲ್ಲವೆಂದು, ಬೇಕಾದ ಪ್ರಶ್ನೆಗಳನ್ನು unstarred ಮಾಡುತ್ತಾರೆಂದರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಮೇಶ್ ಕುಮಾರ್‌ರವರೆ, ಒಂದು ನಿಮಿಷ. ಮಾನ್ಯ ಅರಣ್ಯ ಸಚಿವರು ನನ್ನ ಪ್ರಶ್ನೆಗೆ....

ಉಪಾಧ್ಯಕ್ಷರು : ಅಲ್ಲಿಗೆ ಹೋಗಿ ಬರುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ಸಿ.ಚನ್ನಿಂಗಪ್ಪ : ಮಾನ್ಯ ಅಧ್ಯಕ್ಷರೆ, ತಾವು ಹೇಳಿದಂತೆ, ನಾವು ಬೆಳ್ಳಗ್ಗೆ ಅದರ ಬಗ್ಗೆ ಮತ್ತೆ ಉತ್ತರ ಕೊಡುವ ಕೆಲಸ ಮಾಡುತ್ತೇವೆ. ಇವತ್ತು ನವಿಲುಗಳನ್ನು ಕೊಲ್ಲುವುದರ ಹಿಂದೆ ಯಾರ್ಯಾರಯ ಇದ್ದಾರೆಂಬುದನ್ನು ಕಂಡು ಹಿಡಿದು, ಅದರ ಬಗ್ಗೆ ಹಿರಿಯ ಮಾಜಿ ಮಂತ್ರಿಗಳು ಏನು ಹೇಳುತ್ತಾರೋ, ಅದರಂತೆ ಕಠಿಣವಾದ ಶಿಕ್ಷೆ ವಿಧಿಸುವ ಕೆಲಸವನ್ನು ಇಲಾಖೆಯು ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನೀವು ಅಲ್ಲಿಗೆ ಹೋಗಬೇಕು, ಸಚಿವರಾದ ನಿಮ್ಮ ಬಗ್ಗೆ ನಮ,ಗೆ ಗೌರವವಿದೆ. ಇಷ್ಟೊಂದು ಬೇಜವಾಬ್ದಾರಿ ಉತ್ತರ....

ಉಪಾಧ್ಯಕ್ಷರು : ಚನ್ನಿಗಪ್ಪನವರೆ, ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಪಕ್ಷಿ ಕುಲ ನಾಶವಾಗುತ್ತಿದೆ. ..ಯಾರೂ ಕೇಳುವವರಿಲ್ಲ ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಇ) **ವಿಷಯ** : ಸಾರಿಗೆ ಇಲಾಖೆಯಲ್ಲಿ ವಿಶೇಷವಾಗಿ ಮೋಟಾರು ಇನ್ಸ್‌ಪೆಕ್ಟರ್‌ಗಳ ಅವ್ಯವಹಾರಗಳು, ನೇಮಕಾತಿಗಳಲ್ಲಿ ಸ್ವಜನ ಪಕ್ಷಪಾತ ಇತ್ಯಾದಿ ಬಗ್ಗೆ.